# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:303 • ನೋಂದಣಿ ನಂ.:KARKAN27911 • ವಿಜಯನಗರ • 02.05.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:303 • Reg.No:KARKAN27911 • VIJAYANAGARA • 02.05.2024 • Thursday • Page:04 • Rs:2





ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.

ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
55,000 Plus readers

Place Your Ads
Reach New Audience

9448633038
hampitimes@gmail.com · Valmiki Circle, Hosapete-583201


# ಶಾರ್ಟ್ ಸರ್ಕ್ಯೂಟ್: ಬಡರೋಗಿಗಳ ಜೀವಕ್ಕೆ ಕುತ್ತು!

## ನೂರು ಹಾಸಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ತಾಸಿಗೂ ಅಧಿಕ ವಿದ್ಯುತ್ ವ್ಯತ್ಯಯ । ಗಾಳಿ, ಬೆಳಕು, ಚಿಕಿತ್ಸೆಗೆ ಪರಿತಪಿಸಿದ ರೋಗಿಗಳು

## ಮೂರು ದಶಕ ಕಳೆದರೂ ಆಸ್ಪತ್ರೆಯ ತುರ್ತು ಚಿಕಿತ್ಸಾ ಕೊಠಡಿಗಳಿಗಿಲ್ಲ ಪ್ರತ್ಯೇಕ ವಿದ್ಯುತ್ ಸಂಪರ್ಕ । ಆಸ್ಪತ್ರೆಗೆ ಬೇಕಿದೆ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್

**ಹಂಪಿ ಟೈಮ್ಸ್ ಹೊಸಪೇಟೆ**

ನಿತ್ಯ ನಾನಾ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಬರುವ ನೂರಾರು ಬಡರೋಗಿಗಳಿಗೆ ಸರ್ಕಾರಿ ನೂರು ಹಾಸಿಗೆ ಆಸ್ಪತ್ರೆಯಲ್ಲಿ ದಿಢೀರನೇ ವಿದ್ಯುತ್ ವ್ಯತ್ಯಯವಾದಾಗ ಸಮರ್ಪಕ ಗಾಳಿ, ಬೆಳಕು, ಚಿಕಿತ್ಸೆಗೂ ಪರಿತಪಿಸಬೇಕಿದೆ. ವಿದ್ಯುತ್ ಅವಲಂಬಿತ ಆಪರೇಷನ್, ಡಯಾಲಿಸಸ್, ಆಕ್ಸಿಜನ್ ಸೇರಿದಂತೆ ತುರ್ತು ಚಿಕಿತ್ಸೆ ಕೊಠಡಿಗಳಿಗೆ ರೋಗಿಗಳ ಚಿಕಿತ್ಸೆಗೆ ತೊಂದರೆಯಾಗದಂತೆ ಇಂದಿಗೂ ಪ್ರತ್ಯೇಕ ವೈರಿಂಗ್ ಅಳವಡಿಸದಿರುವುದು ಸಂಬಂಧಿಸಿದ ಅಧಿಕಾರಿಗಳ ಕಾರ್ಯವೈಖರಿಗೆ ಕೈಗನ್ನಡಿಯಂತಿದೆ.

ಹೌದು, ನಗರದ ಉಪವಿಭಾಗ ಮಟ್ಟದ ಸರ್ಕಾರಿ ಸಾರ್ವಜನಿಕ (ನೂರು ಹಾಸಿಗೆ) ಆಸ್ಪತ್ರೆಯಲ್ಲಿ ಬುಧವಾರ ಮಧ್ಯಾಹ್ನ ಶಾರ್ಟ್ ಸರ್ಕ್ಯೂಟಿನಿಂದಾಗಿ ವಿದ್ಯುತ್ ವೈರ್ ಸುಟ್ಟಿದ್ದರಿಂದ, ಒಂದು ತಾಸಿಗೂ ಅಧಿಕ ವಿದ್ಯುತ್ ಪೂರೈಕೆ ಇಲ್ಲದೇ ಆಸ್ಪತ್ರೆ ಸಂಪೂರ್ಣ ಹಗಲೊತ್ತಿನಲ್ಲೆ ಕತ್ತಲಮಯವಾಗಿತ್ತು. ರೋಗಿಗಳು ವೈದ್ಯರ ಕೊಠಡಿ, ಇಂಜೆಕ್ಷನ್ ಹಾಕುವ ಕೊಠಡಿಗಳನ್ನು ಒಬ್ಬರನ್ನೊಬ್ಬರು ತಾಗಿಸಿಕೊಂಡು, ಸಾರಿ ಎಂತೇಳಿ, ಗೋಡೆ ಹಿಡಿದು ಹಡುಕಾಡತೊಡಗಿದರು. ಕೆಲ ರೋಗಿಗಳು ಉಮ್ರ ತಾಳಲಾರದೆ ತಮ್ಮ ಬಟ್ಟೆಗಳಿಂದಲೇ ಗಾಳಿ ಬೀಸಿಕೊಂಡರೆ, ವೈದ್ಯರು ಮಾತ್ರೆ ಚೀಟಿ ಬರೆಯಲು ರೋಗಿಗಳು ಮೊಬೈಲ್ ಟಾರ್ಚ್ ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇನ್ನೂ ಗಣಕ ಯಂತ್ರ ಕೊಠಡಿಯಲ್ಲಿ, ಲ್ಯಾಬ್ ಮತ್ತು ಎಕ್ಸರೇ ಕೊಠಗಳಿಗೆ ದಿಢೀರ್ ವಿದ್ಯುತ್ ಸ್ಥಗಿತದಿಂದಾಗಿ ಆ ಕ್ಷಣದಲ್ಲಿ ಮಾಡುತ್ತಿದ್ದ ಕೆಲಸಗಳೆಲ್ಲವೂ ವ್ಯರ್ಥವಾದವು. 30 ವರ್ಷಕ್ಕೂ ಹಳೆಯ ಆಸ್ಪತ್ರೆಗೆ ಅಂದಿನ ಬಳಕೆಗನುಗುಣವಾಗಿ ವಿದ್ಯುತ್ ಸಂಪರ್ಕದ ವೈರಿಂಗ್ ಮಾಡಲಾಗಿದೆ. ಇಂದಿನ ಬಳಕೆಯ ಅನುಗುಣವಾಗಿ ಮತ್ತು ಸಾಮರ್ಥ್ಯಕ್ಕನುಸಾರವಾಗಿ ಪ್ರತ್ಯೇಕ ವಿದ್ಯುತ್ ವೈರಿಂಗ್ ಇಲ್ಲದಿರುವುದರಿಂದ ಶಾರ್ಟ್ ಸರ್ಕ್ಯೂಟ್ ಸಮಸ್ಯೆಗಳು ಎದುರಾಗುತ್ತವೆ. ಅಲ್ಲದೆ ನೂರು ಹಾಸಿಗೆ ಆಸ್ಪತ್ರೆಗೆ ವಿದ್ಯುತ್ ಬಳಕೆಯ ಸಾಮರ್ಥ್ಯಕ್ಕೆ ತಕ್ಕದಾದ ಪ್ರತ್ಯೇಕ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಜೆಸ್ಕಾಂ ಒದಗಿಸಲು ಮುಂದಾಗಿಲ್ಲವೋ, ಅಥವಾ ಕೇಳುವ ಕಾಳಜಿವುಳ್ಳ ಅಧಿಕಾರಿಗಳಿಲ್ಲವೋ ಎನ್ನುವ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತಿದೆ. ಜಿಲ್ಲಾ ಕೇಂದ್ರವಾಗಿರುವುದರಿಂದ ತುರ್ತು ಚಿಕಿತ್ಸೆಗೆಂದು ನಿತ್ಯ ಆಗಮಿಸುವ ಜೀವನ್ಮರಣದ ಹೋರಾಟದಲ್ಲಿರುವ ರೋಗಿಗಳಿಗೆ ವಿದ್ಯುತ್ ವ್ಯತ್ಯಯ ಜೀವಕ್ಕೆ ಕುತ್ತು ಆಗದಂತೆ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಂಡು ಸೂಕ್ತ ಕ್ರಮವಹಿಸಬೇಕಿದೆ. ರೋಗಿಗಳಿಗೆ ಚಿಕಿತ್ಸೆ ನೀಡುವುದರ ಜೊತೆಗೆ ಚಿಕಿತ್ಸೇತರವಾಗಿಯೂ ಮಾನವೀಯ ನೆಲಗಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಿದೆ. ಸಂಬಂಧಿಸಿದ ಅಧಿಕಾರಿಗಳು ಸಮಸ್ಯೆ ಕುರಿತು ಸೌಲಭ್ಯ ಕಲ್ಪಿಸುವ ಉತ್ಸುಕತೆಯಲ್ಲಿರುವ ಜನಪ್ರತಿನಿಧಿಗಳು ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತರದಿರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೆಯೇ ಕಾದುನೋಡಬೇಕಿದೆ.






> ನೂರು ಹಾಸಿಗೆ ಆಸ್ಪತ್ರೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಆಗಿ, ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿರುವುದು ಗಮನಕ್ಕೆ ಬಂದಿದೆ. ತುರ್ತು ಚಿಕಿತ್ಸಾ ಕೊಠಡಿಗಳಿಗೆ ಪ್ರತ್ಯೇಕ ವೈರಿಂಗ್ ಅಗತ್ಯವಿದೆ. ಸೂಕ್ತ ಕ್ರಮವಹಿಸಲು ಮುಖ್ಯ ಆರೋಗ್ಯ ಆಡಳಿತಾಧಿಕಾರಿಗೆ ಸೂಚಿಸಲಾಗಿದೆ.
>
> – **ಶಂಕರನಾಯ್ಕ,** ಡಿಎಚ್‌ಒ, ವಿಜಯನಗರ ಜಿಲ್ಲೆ

> 40 ಡಿಗ್ರಿಗೂ ಅಧಿಕ ಬಿಸಿಲಿನ ತಾಪಮಾನವಿರುವ ಈ ಬಿಸಿಲ ನಾಡಲ್ಲಿ ಮನೆ, ಆಫೀಸ್‌ಗಳಲ್ಲಿ ಫ್ಯಾನಿನ ಗಾಳಿ ಸಾಲದೆ, ಡಬಲ್ ಎಸಿಗೆ ಜನರು ಮೊರೆಹೋಗುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯನ್ನೆ ಅವಲಂಬಿಸಿ ಬರುವ ಬಡ ರೋಗಿಗಳಿಗೆ ಕನಿಷ್ಠ ಗಾಳಿ, ಬೆಳಕು, ಚಿಕಿತ್ಸೆಗೆ ಅಗತ್ಯ ವಿದ್ಯುತ್ ಪೂರೈಸಲು ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಿ ಜನರ ಜೀವ ಉಳಿಸಬೇಕು.
>
> – **ಕೆ.ರವಿಶಂಕರ,** ಹೊಸಪೇಟೆ.

# ಮತಗಟ್ಟೆ ಅಧಿಕಾರಿ, ಸಿಬ್ಬಂದಿಗೆ ಅಂತಿಮ ಹಂತದ ತರಬೇತಿ



**ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೇ 7ರಂದು ಮತದಾನ ನಡೆಯಲಿದ್ದು, ಮತಗಟ್ಟೆ ಕೇಂದ್ರಗಳಿಗೆ ನಿಯೋಜನೆಯಾದ ಮತಗಟ್ಟೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬುಧವಾರ ಎರಡನೆ ಅವಧಿಯ ತರಬೇತಿ ನಡೆಯಿತು.

ನಗರದ ಸಂಡೂರ ರಸ್ತೆಯಲ್ಲಿರುವ ಎಲ್‌ಎಫ್‌ಎಸ್ ಶಾಲೆಯಲ್ಲಿ ನಡೆದ ತರಬೇತಿಯಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆಗಳಿಗೆ ನಿಯೋಜನೆಗೊಂಡ 304 ಪಿಆರ್‌ಓ, 304 ಎಪಿಆರ್‌ಓ, 304 ಎರಡನೇ ಪೋಲೀಂಗ್ ಆಫೀಸರ್, 304 ಮೂರನೇ ಪೋಲಿಂಗ್ ಆಫೀಸರ್ ಸೇರಿ ಒಟ್ಟು 1216 ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ನೀಡಲಾಯಿತು. ತರಬೇತಿಯಲ್ಲಿ 21 ಸೆಕ್ಟರ್ ಅಧಿಕಾರಿಗಳು ಹಾಗೂ 8 ಜನ ಚುನಾವಣಾ ತರಬೇತುದಾರರು ಭಾಗಿಯಾಗಿದ್ದರು.

ಮತದಾನ ದಿನದಂದು ಮತ್ತು ಮತದಾನ ದಿನದ ಹಿಂದಿನ ದಿನದಂದು ಮತಗಟ್ಟೆ ಅಧಿಕಾರಿಗಳು ಮತ್ತು ಸಿಬ್ಬಂದಿ ನಿರ್ವಹಿಸಬೇಕಾದ ಕಾರ್ಯ ಚಟುವಟಿಕೆಗಳ ಬಗ್ಗೆ ಚುನಾವಣಾ ಮಾಸ್ಟರ್ ಟ್ರೇನರ್ ಅವರು ತರಬೇತಿ ನೀಡಿದರು.

ಮತಗಟ್ಟೆ ಅಧಿಕಾರಿಗಳು ತಮ್ಮ ತಂಡದ ಸದಸ್ಯರನ್ನು ಒಗ್ಗೂಡಿಸಿಕೊಳ್ಳಬೇಕು. ಮತದಾನ ದಿನದ ಹಿಂದಿನ ದಿನ ಮಸ್ಟರಿಂಗ್ ಕೌಂಟರನಲ್ಲಿ ಸಾಮಗ್ರಿಗಳನ್ನು ಸರಿಯಾಗಿ ಪಡೆದುಕೊಳ್ಳಬೇಕು. ನೀಡಲಾಗುವ ಸಿಯು, ಬಿಯು, ವಿವಿಪ್ಯಾಟ್‌ಗಳು ಮತಗಟ್ಟೆಗೆ ಸೇರಿದ್ದ ಬಗ್ಗೆ ಮತಯಂತ್ರಗಳ ಐಡಿಗಳನ್ನು ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳಬೇಕು. ಮತಯಂತ್ರಗಳನ್ನು ಮತದಾನ ದಿನಂದು ಬೆಳಗ್ಗೆ 5.30 ಗಂಟೆಗೆ ಮುನ್ನ ಜೋಡಣೆ ಮಾಡಿ ಅಣುಕು ಮತದಾನ ಪ್ರಾರಂಭಿಸುವ ಪ್ರಕ್ರಿಯೆಗಳನ್ನು >>2

> ಲೋಕಸಭಾ ಚುನಾವಣೆಯ ಕಾರ್ಯನಿಮಿತ್ತ ವಿವಿಧ ತಾಲೂಕುಗಳಿಂದ ಹೊಸಪೇಟೆಯಲ್ಲಿ ನಡೆದ ತರಬೇತಿಗೆ ಆಗಮಿಸಿದ್ದ ಪಿಆರ್‌ಒ, ಎಪಿಆರ್‌ಒ, ಪೊಲಿಂಗ್ ಆಫಿಸರ್ ಸೇರಿದಂತೆ ಮತಗಟ್ಟೆ ಅಧಿಕಾರಿಗಳಿಗೆ ವಿಶೇಷ ಅಡುಗೆ ಮಾಡಿಸಿದ್ದರು. ಅಡುಗೆ ರುಚಿಯಾಗಿದ್ದರೂ, ಎಲ್ಲರಿಗೂ ದೊರೆಯುವಲ್ಲಿ ವಿಳಂಭವಾಗಿದ್ದ ಅನೇಕರು ವ್ಯವಸ್ಥೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



# ಶ್ರೀ ಮರುಳಸಿದ್ದೇಶ್ವರ ಸ್ವಾಮಿ ಜಯಂತಿ ಮೇ 10 ರಂದು



**ಹಂಪಿ ಟೈಮ್ಸ್ ಕೊಟ್ಟೂರು**

ಡೋಣೂರು ಶ್ರೀ ಚಾಣಕೋಟಿ ಮಠದ ಆಶ್ರಮದಲ್ಲಿ ಮೇ 10 ರಂದು ಶ್ರೀ ಗುರು ಮರಳಸಿದ್ದೇಶ್ವರ ಮತ್ತು ಬಸವೇಶ್ವರ ಜಯಂತಿ ಶಿವದೀಕ್ಷೆ ಹಾಗೂ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಸಿದ್ಧಲಿಂಗ ಶಿವಾಚಾರ್ಯರು ಹೇಳಿದರು.

ಚಾನುಕೋಟಿ ಮಠದ ಆಶ್ರಮದಲ್ಲಿ ಕರಿದ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು ಕಳೆದ 30 ವರ್ಷಗಳಿಂದ ಶ್ರೀಮಠ ಸಾಮೂಹಿಕ ವಿವಾಹ ಆಯೋಜಿಸಿಕೊಂಡು ಬಂದಿದ್ದು. ಧಾರ್ಮಿಕ ಕೈಂಕಾರ್ಯ, ಜೊತೆಗೆ ಸಮಾಜದಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುವುದು, ಆರೋಗ್ಯ ಜಾಗೃತಿ, ಶಿಕ್ಷಣ ಪ್ರಸಾರ ಮಾಡುತ್ತಾ ಬರಲಾಗಿದೆ ಎಂದು ತಿಳಿಸಿ. ಈ ಹಿನ್ನೆಲೆ ಮೇ 1 ರಿಂದ 9ರವರೆಗೆ ತೇರುಬಯಲು ಬಸವೇಶ್ವರ ದೇವಸ್ಥಾನದ ಮುಂಭಾಗ ಸಾಮೂಹಿಕ ನೃತ್ಯ, ಜನಪದ ಗೀತೆ, ಪವಾಡ ರಹಸ್ಯ ಬಯಲು, ನೀರಿನಲ್ಲಿ ರಂಗೋಲಿ ಹಾಕುವುದು, ಚಿತ್ರಕಲೆ ಪ್ರದರ್ಶನ ,ಕನ್ನಡ ಮತ್ತು ಸಾಹಿತ್ಯ ರಂಗಭೂಮಿ ಕುರಿತು ಉಪನ್ಯಾಸ.


ಹಾಗೂ ಶಿಕ್ಷಣದ ಮಹತ್ವ ಉಪನ್ಯಾಸ, ಆರೋಗ್ಯ ಸಲಹೆ, ಕ್ರೀಡಾ ಮಾಹಿತಿ, ಮಹಿಳಾ ಘೋಷ್ಠಿ, ಮಕ್ಕಳ ಆರೈಕೆ, ವೀರಗಾಸೆ, ಗಮಕವಾಚನ, ಸುಗಮ ಸಂಗೀತ, ಯೋಗ ಪ್ರದರ್ಶನ, ರಸಮಂಜರಿ, ಭರತನಾಟ್ಯ, ನಾಟಕ ಪ್ರದರ್ಶನ, ಸೋಬಾನ ಪದಗಳು ಇರಲಿವೆ ಎಂದು ತಿಳಿಸಿದರು. ಮೇ 10 ಸಾಮೂಹಿಕ ವಿವಾಹ ಶಿವದೀಕ್ಷೆ ರುದ್ರ ಹೋಮ ಜರಗಲಿವೆ ಎಂದು ತಿಳಿಸಿದರು.

# ಬೈಪಾಸ್ ಮೇಲ್ಸೇತುವೆ ಎನ್‌ಎಚ್ ರಸ್ತೆಯಲ್ಲೆ ತೋಡಿದ ತಗ್ಗಿಗೆ ಕಾರು ಕಾಮಗಾರಿ ಪರಿಶೀಲಿಸದ ಅಧಿಕಾರಿಗಳ ವಿರುದ್ಧ ಜನರ ಆಕ್ರೋಶ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹೊರವಲಯದ ಸಂಡೂರು ರಸ್ತೆಯ ಮಾರ್ಗ ಮದ್ಯೆ ಇತ್ತೀಚೆಗೆ ಬಳ್ಳಾರಿ ಬೈಪಾಸ್ ಮೇಲ್ಸೇತುವೆ ನಿರ್ಮಿಸಲಾಗಿದೆ. ಮೇಲ್ಸೇತುವೆ ಮೇಲೆ ಕೆಲ ದಿನಗಳಿಂದ ಅನೇಕ ವಾಹನಗಳು ಸಂಚರಿಸಿವೆ. ಬುಧವಾರ ರಾತ್ರಿ ಚಾಲಕ ಕಾರು ಚಲಾಯಿಸುತ್ತಿರುವಾಗ ಮೇಲ್ಸೇತುವೆ ಮೇಲೆ ವಿದ್ಯುತ್ ಬೆಳಕು ಇಲ್ಲದ್ದರಿಂದ, ರಸ್ತೆಯ ಮೇಲೇಯೆ ತೋಡಲಾದ ತಗ್ಗಿದೆ ಚಾಲಕನ ನಿಯಂತ್ರಣ ತಪ್ಪಿ ಗುಂಡಿಗೆ ಇಳಿದಿದೆ. ವಾಹನವೂ ಜಖಂಗೊಂಡಿದ್ದು, ವಾಹನ ಚಾಲಕ ಗಾಯಗೊಂಡಿದ್ದಾರೆ. ಅಲ್ಲಿದ್ದ ಸ್ಥಳೀಯ ಚಾಲಕರು ಮೇಲ್ಸೇತುವೆ ರಸ್ತೆ ಮೇಲೇಯೆ ಬೃಹತ್ ಗುಂಡಿ ತೋಡಿ, ವಾಹನ ಸಂಚಾರ ನಿಷೇಧಕ್ಕೆ ಕ್ರಮವಹಿಸದ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಅರೆಬರೆ ಕಾಮಗಾರಿ ನಡೆಸಿ, ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಕೂಡಲೇ ಅವರ ವಿರುದ್ಧ ಸರ್ಕಾರ ಸೂಕ್ತ ಕ್ರಮಜರುಗಿಸಬೇಕು ಎಂದು ಚಾಲಕ ವೀರಭದ್ರ ಒತ್ತಾಯಿಸಿದ್ದಾರೆ.








ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

House For Sale



3 BHK independent Duplex House with Built Area 2300 sq.ft.
in an extent of 1500 sq.ft. for Sale
at Rajeev Nagar, 2nd Cross, Hospet
(adjacent KSSIDC Industrial Estate)
94409 86570

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

MASSEY FERGUSON · TAFE
ವಿಜಯಶ್ರೀ ಮೋಟಾರ್ಸ್
(ಟ್ರ್ಯಾಕ್ಟರ್ ವಿಭಾಗ)



RRR GROUP
99801 27607
73533 06719

ಸುದ್ದಿ, ಜಾಹೀರಾತು ಕಚೇರಿ
ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
# ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
94486 33038
Email: hampitimes@gmail.com

ಮಕ್ಕಳು ಅರಸರಾಗಬೇಕೆ?
ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

|| ಶ್ರೀ ಸಿದ್ಧಿವಿನಾಯಕ ಪ್ರಸನ್ನ ||
ಕೇರಳ ಮಾಂತ್ರಿಕ ಜ್ಯೋತಿಷ್ಯರು
ಕೇರಳದ ಮಳಯಾಳ ಕುಟ್ಟಿಚಾತನ್ ಪದ್ಧತಿಯಿಂದ ಶೀಘ್ರ ಪರಿಹಾರ



9880956386
ವಿದ್ಯೇ ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ–ಪುರುಷ ಪ್ರೇಮವಿವಾಹಕ್ಕೆ ಯಂತ್ರ ಪೂಜೆ, ಮಾಟ–ಮಂತ್ರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಶೀಘ್ರ ಹಾಗೂ ಶಾಶ್ವತ ಪರಿಹಾರ ಶತಸಿದ್ಧ.
ಸಂಪರ್ಕಿಸಿರಿ: ಪಂ.ಪೊದುವಾಳ್ ಎಸ್.ಜಿ.ಅಣ್ಣಪ್ಪ ಕುಮಾರನ್, ಶ್ರೀಸಿದ್ಧಿವಿನಾಯಕ ದೇವಸ್ಥಾನ ಹತ್ತಿರ(ಮನೆ), ಹೊಸಪೇಟೆ, ವಿಜಯನಗರ ಜಿಲ್ಲೆ

## ಬೆಳಕಿನ ಹಾದಿ

# ಕೆಲಸವ್ರೋ? ಆತ್ಮತೃಪ್ತಿಯೋ?

■ ಆರ್.ಬಿ.ಗುರುಬಸವರಾಜ

ಒಂದು ಚಳಿಗಾಲದ ಮುಂಜಾನೆ, ಒಬ್ಬ ಚಿಕ್ಕ ಹುಡುಗ ಟೆಲಿಫೋನ್ ಬೂತ್‌ಗೆ ಬಂದನು. ಅಲ್ಲಿ ಅವನು ಕಾಯಿನ್ ಹಾಕಿ ಕರೆ ಮಾಡಲು ಪ್ರಾರಂಭಿಸಿದ. ಇದನ್ನೆಲ್ಲಾ ಪಕ್ಕದಲ್ಲಿದ್ದ ಇಬ್ಬರು ವೀಕ್ಷಿಸುತ್ತಿದ್ದರು. ಅವರು ಹುಡುಗನ ಸಂಭಾಷಣೆಯನ್ನು ಕುತೂಹಲದಿಂದ ಆಲಿಸಿದರು.



ಆ ಹುಡುಗ ಫೋನ್‌ನಲ್ಲಿ 'ಮೇಡಂ, ನಾನು ಬಡವ, ನಿಮ್ಮ ತೋಟದ ಕೆಲಸವನ್ನು ನನಗೆ ಕೊಡಬಹುದೇ?' ಎಂದನು. ಅತ್ತ ಕಡೆಯಿಂದ "ಕ್ಷಮಿಸಿ, ಅದಕ್ಕೆ ಈಗಾಗಲೇ ನನ್ನಲ್ಲಿ ಒಬ್ಬರಿದ್ದಾರೆ" ಎಂದು ಮಹಿಳೆ ಉತ್ತರಿಸಿದಳು.

ಅದಕ್ಕೆ ಹುಡುಗ 'ಮೇಡಂ, ನನಗೆ ಪೂರ್ಣ ಹಣ ಬೇಡ, ಈಗ ನೀವು ಆತನಿಗೆ ನೀಡುವ ಅರ್ದ ಹಣ ನೀಡಿ ಸಾಕು, ನಾನು ಬದುಕೊಳ್ತೇನೆ' ಎಂದ. "ನೋಡಪ್ಪಾ ಈಗಾಗಲೇ ಅವನು ಮಾಡುವ ಕೆಲಸದಿಂದ ನಾನು ತೃಪ್ತನಾಗಿದ್ದೇನೆ. ಅವನು ಚೆನ್ನಾಗಿ ಕೆಲಸ ಮಾಡುತ್ತಿದ್ದಾನೆ. ಹಾಗಾಗಿ ಅವನನ್ನು ಕೆಲಸದಿಂದ ತೆಗೆಯೋದಿಲ್ಲ" ಎಂದು ತನ್ನ ನಿಲುವನ್ನು ತಿಳಿಸಿದಳು.

'ಮೇಡಂ, ತೋಟದ ಕೆಲಸದ ಜೊತೆಗೆ ನಿಮ್ಮನೆ ಕೆಲಸವನ್ನೂ ಮಾಡುತ್ತೇನೆ. ನಿಮಗೆ ತಿಳಿದಷ್ಟು ಕೂಲಿ ಕೊಡಿ' ಎಂದು ಬೇಡಿಕೊಂಡನು. ಆದರೆ ಆ ಮಹಿಳೆ ಎಲ್ಲವನ್ನೂ ನಿರಾಕರಿಸಿದಳು. ವಿಧಿಯಿಲ್ಲದೇ ಆ ಹುಡುಗ ಫೋನ್ ಕರೆಯನ್ನು ಕಟ್ ಮಾಡಿ ಅಲ್ಲಿಂದ ಹಿಂತಿರುಗಿದ. ಇದುವರೆಗೂ ಇವನ ಎಲ್ಲಾ ಸಂಭಾಷಣೆಗಳನ್ನು ಆಲಿಸುತ್ತಿದ್ದ ಇಬ್ಬರು ವ್ಯಕ್ತಿಗಳು ಹುಡುಗನ ಬಳಿಗೆ ನಡೆದರು. ಅದರಲ್ಲಿ ಒಬ್ಬನು 'ಏಯ್ ಹುಡುಗ, ನಾನು ನಿನ್ನ ವರ್ತನೆ ಮತ್ತು ನಿನ್ನ ಸಕಾರಾತ್ಮಕ ಮನೋಭಾವವನ್ನು ಇಷ್ಟಪಡುತ್ತೇನೆ ಮತ್ತು ನಿನಗೆ ಕೆಲಸ ನೀಡಲು ಬಯಸುತ್ತೇನೆ' ಎಂದನು.

ಹುಡುಗ ಅದನ್ನು ನಯವಾಗಿ ನಿರಾಕರಿಸಿದನು. ಆಗ ಇನ್ನೊಬ್ಬ ವ್ಯಕ್ತಿಯು 'ಆದರೆ ನೀನು ಇದುವರೆಗೂ ಫೋನ್‌ನಲ್ಲಿ ಮಹಿಳೆಯೊಂದಿಗೆ ಮಾತನಾಡುವಾಗ ಕೆಲಸಕ್ಕಾಗಿ ಮನವಿ ಮಾಡುತ್ತಿದ್ದೆಯಲ್ಲ' ಎಂದನು.

ಅದಕ್ಕೆ ಹುಡುಗ ಉತ್ತರಿಸಿದ. "ಇಲ್ಲ ಸರ್, ಈಗಾಗಲೇ ನನಗೆ ಕೆಲಸ ಇದೆ. ನಾನು ಮಾಡುತ್ತಿರುವ ಕೆಲಸದಲ್ಲಿ ನನ್ನ ಕಾರ್ಯಕ್ಷಮತೆಯನ್ನು ಪರಿಶೀಲಿಸುತ್ತಿದ್ದೆವಿದುವರೆಗೂ ನಾನು ಮಾತನಾಡುತ್ತಿದ್ದ ಆ ಹೆಂಗಸಿನ ತೋಟದಲ್ಲಿ ಕೆಲಸ ಮಾಡುತ್ತಿರುವವನು ನಾನೆ" ಎಂದನು.

ಹುಡುಗನ ಮಾತಿನಿಂದ ಇಬ್ಬರೂ ಚಕಿತರಾದರು. ಹೀಗೇಕೆ ಮಾಡಿದೆ ಎಂದು ಪ್ರಶ್ನಿಸಿದರು. ಅದಕ್ಕೆ ಹುಡುಗನು "ನಾವು ಮಾಡುವ ಕೆಲಸಕ್ಕಾಗಿ ಪ್ರತಿಕ್ರಿಯೆಯನ್ನು ಪಡೆಯುವುದು ನಮ್ಮ ಆತ್ಮ ವಿಶ್ವಾಸವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಒಳಮುಖವಾಗಿ ನಮ್ಮನ್ನು ನಾವು ನೋಡುವ ಮೂಲಕ ನಮ್ಮ ದೌರ್ಬಲ್ಯಗಳನ್ನು ಕಂಡುಹಿಡಿಯಲು ಸಹಾಯ ಮಾಡುತ್ತದೆ. ನಮ್ಮನ್ನು ನಾವು ಇಂತಹ ಪರೀಕ್ಷೆಗಳಿಗೆ ಒಡ್ಡಿಕೊಳ್ಳುವುದರಿಂದ ದೌರ್ಬಲ್ಯಗಳನ್ನು ಸುಧಾರಿಸಲು ಪ್ರಯತ್ನಿಸಬಹುದು. ನಾವು ಒಳ್ಳೆಯ ಕೆಲಸವನ್ನು ಮಾಡಿದರೆ ಅದೇ ನಮಗೆ ತೃಪ್ತಿ ಅಲ್ಲವೇ" ಎಂದನು. ಅದಕ್ಕೆ ಇಬ್ಬರೂ ವ್ಯಕ್ತಿಗಳು ಹೌದೆಂದು ತಲೆದೂಗುತ್ತಾ ಮುಂದೆ ನಡೆದರು. ಕೆಲಸದಲ್ಲಿ ಆತ್ಮತೃಪ್ತಿ ಕಾಣುವುದೇ ನಿಜವಾದ ಕಾಯಕ. ಇದನ್ನು ಎಲ್ಲರೂ ಬೆಳೆಸಿಕೊಳ್ಳಬೇಕಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for
EVENT COVERAGE
& Advertisements
in Leading
Hampi Times
Daily News Paper
M: 94486 33038

# ಉಳಿದುಹೋದ ಬಯಕೆ

ಒಮ್ಮೆ ಬೆಳಗಾವಿಯಲ್ಲಿರುವಾಗ, ಪಂಡಿತ್ ರಾಮಭಾವು ಬಿಜಾಪುರೆಯವರನ್ನು ಕಾಣಬೇಕೆಂದು ಅನಿಸಿತು. ಮಿತ್ರರಾದ ಕುಸಗಲ್ಲರಿಗೆ ತಿಳಿಸಲು 'ನಾವು ಊರಾಗಿದ್ರೂ ಅವರ ಮನೀಗ್ ಹೋಗಕಾಗಿಲ್ಲ, ಬರ್ರಿ ಸರ' ಎಂದು ಕರೆದೊಯ್ಯಲು ಒಪ್ಪಿದರು. ಮುಸ್ಸಂಜೆ ಹೊತ್ತಿಗೆ ಅವರ ಮನೆಯತ್ತ ಹೊರಟೆವು. ಹಳೇ ಬೆಳಗಾವಿಯ ಬೀದಿಗಳು. ಪಶ್ಚಿಮಘಟ್ಟದ ಜಿರ್ರೋ ಮಳೆ. ಕಚಿಪಿಚಿ ಕೆಸರು. ಹಸುರು ಕಕ್ಕುವ ಗಿಡಮರಪೊದೆ. ಅದರೊಳಗಿಂದ ಚಿಟಕಿ ತಾಳದಂತೆ ಕಪ್ಪೆನಾದ. ಮನೆಯ ಭಾವಣಿ ಕಾಂಪೌಂಡು ಗೋಡೆಗಳೆಲ್ಲ ಹಸಿರ ಸ್ವೆಟರುಟ್ಟಂತೆ ಬೆಳೆದ ಹಾವಸೆ. ಮಬ್ಬುಕವಿದ ಬೂದಿಬಡುಕ ಆಗಸದಲ್ಲಿ ಶಿವಸೇನೆಯ ಮಾರುದ್ದ ಸೀಳಿನ ಭಗವಾಧ್ವಜಗಳ ಪಟಪಟ-ಇತ್ಯಾದಿ ಕಣ್ಣೊಳಗೆ ತುಂಬುತ್ತಿರಲು ಮನೆ ಮುಟ್ಟಿದೆವು.

ಕದ ತೆರೆದಿದ್ದು ಒಂದು ಹಣ್ಣುಮುದುಕಿ. ಅದು 'ಕಷಾ ಸಾಠಿ ಆಲ?' (ಏನು ಬಂದಿರಿ?) ಎಂದು ಹಣೆ ಸುಕ್ಕಿಸಿ ಪ್ರಶ್ನೆ ಎಸೆಯಿತು. 'ಬಿಜಾಪುರೆ ಮಾಸ್ತರನ್ನು ಕಾಣಬೇಕಿತ್ತು' ಎನ್ನಲು 'ಹಂಗೇನ್ರಿ? ಬರ್ರಿಬರ್ರಿ. ಒಳಗ ಬಂದ ಕುಂದರ್ರಿ. ಮ್ಯಾಲ ಹುಡ್ರುಗೆ ಅಭ್ಯಾಸ ಮಾಡಿಸಲಿಕ್ಕೆ ಹತ್ಯಾರ' ಎಂದು ಬರಮಾಡಿಕೊಂಡಿತು. 'ತಾವು ಬಿಜಾಪುರೆಯವರಿಗೆ..?' ಎನ್ನಲು 'ಕಿರೀ ಮಗಳ್ರೀ' ಎಂದು ಬದಲು ಸಿಕ್ಕಿತು. ಕಿರುಮಗಳೇ ಇಷ್ಟು ಹಣ್ಣಾಗಿರಬೇಕಾದರೆ, ಅಪ್ಪ ಇನ್ನೆಷ್ಟು ಕಳಿತಿರಬೇಕು ಎಂದು ಸೋಜಿಗ ಪಟ್ಟುಕೊಂಡು ಕುಳಿತೆವು. ಹತ್ತು ಮಿನಿಟು ಮುಗಿದಿರಬೇಕು. 'ಪಾಠ ಮುಗಿದಿದೆ, ಅತಿಥಿಗಳು ಮೇಲೆ ಹೋಗಬಹುದು' ಎಂದು ಸಂದೇಶ ಬಂತು. ಕರೆಂಟು ಹೋಗಿ ಕತ್ತಲಾಗುತ್ತಿತ್ತು. ಪಾಚಿಹಿಡಿದ ಪಾವಟಿಗೆಗಳನ್ನು ಹುಶಾರಾಗಿ ಹತ್ತಿ ಮೇಲೆ ಹೋದೆವು.

ಸಣ್ಣದೊಂದು ಖೋಲಿಯಲ್ಲಿ ಗ್ಯಾಸ್‌ಬತ್ತಿಯ ಬೆಳಕಲ್ಲಿ ಬಿಜಾಪುರೆ ಲೋಡುತೆಕ್ಕೆಗೆ ಒರಗಿದ್ದರು. ಇಬ್ಬರು ಶಿಷ್ಯರು-ಅತಿಥಿ ಸತ್ಕಾರದಲ್ಲಿ ನೆರವಾಗಲೆಂದೊ ಏನೊ-ಅಲ್ಲೇ ಗೋಡೆಗೊರಗಿ ಕುತೂಹಲದ ದಿಟ್ಟಿತೊಟ್ಟು ನಿಂತಿದ್ದರು. ಅವರು ಗುರುಗಳಿಗೆ ಕೋಟು ತೊಡಿಸಲು ನೆರವಾಗಿರಬೇಕು-ತಿಳಿಯಾಗಸ ಬಣ್ಣದ ಕೋಟಿನ ಗುಂಡಿಗಳನ್ನು ಬಿಜಾಪುರೆ ಆಗಷ್ಟೆ ಹಾಕಿಕೊಳ್ಳುತ್ತಿದ್ದರು. ಆ ಕೋಟಿನಲ್ಲಿ ಅವರು ಚಂದ ಕಾಣುತ್ತಿದ್ದರು. ಆರಡಿ ಎತ್ತರದ, ತಲೆಕೆಳಗಾಗಿ ಹಿಡಿದ ತಂಬೂರಿಯಂತಿದ್ದ ನೆಟ್ಟನೆ ಕಾಯದ ಬಿಜಾಪುರೆ, ವಯೋಸಹಜ ಸೊರಗಿದ್ದರು. ಹೊರಚಾಚಿದ ಗಾಂಧಿಕಿವಿ. ವಿಶಾಲ ಹಣೆ. ಕರೀಟೊಪ್ಪಿಗೆ. ಹೊಳೆಗಣ್ಣು. ಪೇಟಿ ಮನೆಗಳ ಮೇಲೆ ಆಡಲೆಂದೇ ಮಾಡಿದಂತಿರುವ ನೀಳ್‌ಬೆರಳು. ಎದುರುಗಡೆ ಅರ್ಧ ಕತ್ತರಿಸಿಟ್ಟ ಕುಂಬಳಕಾಯಿ ಹೋಳಕೆಗಳಂತಹ ವಿಶ್ರಾಂತ ಸ್ಥಿತಿಯಲ್ಲಿರುವ ತಬಲ. ಬಗಲಿಗೆ ಹಾರ್ಮೋನಿಯಂ. ಬಿಜಾಪುರೆ ಭಾರತದ ಬಹುತೇಕ ಹಿಂದೂಸ್ಥಾನಿ ಗಾಯಕರಿಗೆ ಸಾಥಿದಾರರಾಗಿ ಪೇಟಿ ನುಡಿಸಿದವರು.

ನಾವು ನಮಸ್ಕರಿಸಿ ಸುತ್ತ ಕೂತೆವು. 'ಹ್ಞಾಂ ಹೇಳ್ರಿ. ಏನ್ ಬಂದದ್ದು? ಎಲ್ಲಿಂದ?' ಎಂದರು ಬಿಜಾಪುರೆ. 'ನಿಮ್ಮನ್ನು ಕಾಣಲೆಂದೇ ಬಂದೆವು' ಎಂದೆವು. 'ಭಲೋ ಆತು. ಥಂಡಿ ಅದ. ಚಾ ಕುಡಿಯೋಣಲ್ಲ?' ಎಂದು ಶಿಷ್ಯನತ್ತ ನೋಡಲು, ಆತ ಮರಾಠಿಯಲ್ಲಿ 'ಈಗ ತಂದೆ' ಎಂದು ಕೆಳಗೆ ದೌಡಿದನು. 'ನಿಮ್ಮ ಆರೋಗ್ಯದ ರಹಸ್ಯ?'ವೆಂದು ಕೇಳಲು, ಆತ್ಮವಿಶ್ವಾಸ ತುಂಬಿದ ಗಟ್ಟಿದನಿಯಲ್ಲಿ 'ಸಂಗೀತಾ! ನಮ್ಮ ಸಂಗೀತ್ ಮಂದಿಯೆಲ್ಲ ದೀರ್ಘಾಯುಷ್ಯದೋರು. ಹಾಡೋದೇ ದೊಡ್ಡ ಪ್ರಾಣಾಯಾಮ ಆಗ್ತದ' ಎಂದು ನಕ್ಕರು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

**ಹಿನ್ನೆಲೆ ಕೆದಕಿದೆ:** 'ನಮ್ಮ ಮುತ್ತ್ಯಾ ಮೂಲಮಂದಿ ಬಿಜಾಪುರದ ವರಂತ. ನಮ್ಮಪ್ಪ ಸಾಲಿ ಮಾಸ್ತರ. ದೊಡ್ಡ ಸಾಹಿತಿ. ಸಂಗೊಳ್ಳಿ ರಾಯಣ್ಣ ನಾಟಕ ಬರದೋರು. ಅವರಿಗೆ ಅಥಣಿ ತಾಲೂಕ ಕಾಗವಾಡಕ್ಕ ವರ್ಗ ಆಯ್ತು. ಮುಂದ ಬೆಳಗಾಂವ್ನಿ ಸೇರಿಕೊಂಡಿವಿ' ಎಂದರು. ಸಂಗೀತದ ಹಿನ್ನೆಲೆ ವಿಚಾರಿಸಿದೆ: 'ರಾಮಕೃಷ್ಣ ಬುವಾ ವಝೆ ನನ್ನ ಗುರುಗಳು. ನನಗ ವೋಕಲ್ ಕಲೀಲಿಕ್ಕ ಆಸೆಯಿತ್ತು. ಯಾನ್ ಮಾಡೋದರಿ ದನಿ ಒಡದಬಿಡ್ತು. ಆವಾಜ್ ಹೋಗಿಬಿಡ್ತು. ಅದಕ್ಕಾ ಈ ಪೇಟಿ ಕಡಿ ಬಂದಬಿಟ್ಟೆ. ಈಗಲೂ ಥೋಡಥೋಡ ಹಾಡ್ತೇನಿ. ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ಲ, ಬಸವರಾಜ ರಾಜಗುರು, ಕುಮಾರಗಂಧರ್ವ, ಮಾಣಿಕವರ್ಮ, ಅಮೀರಖಾನ್- ಹೀಂಗ ಬೇಕಾದಷ್ಟ ಮಂದಿಗೆ ಸಾಥ್ ಮಾಡೀನಿ' ಎಂದರು. 'ಯಾರ ಜತೆ ಹೆಚ್ಚು ಸಂತೋಷ ಸಿಕ್ಕಿತು' ಎನ್ನಲು 'ಅಮೀರ್ ಖಾನ್ ಹಾಡಿಕೆಗೆ. ಅವರು ಭಯಂಕರ ಭಲೋ ಹಾಡ್ತಿದ್ದರು' ಎಂದರು.



ಹೊರಗೆ ಹನಿಯುತ್ತಿದ್ದ ತುಂತುರು ಮಳೆಯಂತೆ ಒಳಗೆ ನಮ್ಮ ಮಾತುಕತೆ ನಡೆಯಿತು. ಅವರ ಮಾತೊ, ಫಾರಸಿ ಮರಾಠಿ ಕನ್ನಡ ಹದವಾಗಿ ಬೆರೆತದ್ದು. ಸಂಗೀತವೂ ಒಂದು ಸಂಕರಕಲೆ. ಬೆರಕೆಯಿಲ್ಲದೆ ಅದು ಹುಟ್ಟುವುದೇ ಇಲ್ಲ. ಅದರಲ್ಲೂ ಹಾರ್ಮೊನಿಯಂ ತಾನು ಹುಟ್ಟಿಸುವ ಸಮಸ್ತ ಸ್ವರಗಳನ್ನು ಬೆರೆಸುವ ಮಾಯಾಮಂಜೂಷ. ಹಿಂದೊಮ್ಮೆ ಅದರ ಕವಚ ತೆಗೆದು ಅದು ಹೇಗೆ ಕೆಲಸ ಮಾಡುತ್ತದೆ ಎಂದು ಪರೀಕ್ಷಿಸಿದ್ದೆ. ಕುಲುಮೆಯ ತಿದಿಯಂತೆ ಹಿಂಬದಿ ತೂತುಗಳ ಮೂಲಕ, ಪ್ರಾಣಾಯಾಮದ ಕುಂಭಕದಂತೆ ಗಾಳಿ ಒಳಗೆ ತುಂಬಿಕೊಳ್ಳುತ್ತದೆ. ಮುಂಭಾಗದಲ್ಲಿರುವ ಕರಿಬಿಳಿ ಮನೆಗಳನ್ನು ಒತ್ತಿದರೆ, ತುಂಬಿಕೊಂಡ ಉಸಿರು ಜರೂರತ್ತಿಗೆ ತಕ್ಕಂತೆ ರಂಧ್ರವುಳ್ಳ ಕೊಂಡಿತುದಿಗಳಿಂದ ಹೊರಟು ಏರಿಳಿತಗಳಲ್ಲಿ ನಾದ ಹೊಮ್ಮಿಸುತ್ತದೆ. ಏಕಕಾಲಕ್ಕೆ ಹೊಮ್ಮುವ ಈ ಹಲವು ನಾದದ ಧಾರೆಗಳು ಒಂದಾಗಿ ಹೊಳೆಯಂತೆ ಹರಿಯುತ್ತವೆ.

ನಾನು ಶೇಷಾದ್ರಿ ಗವಾಯಿ, ಪುಟ್ಟರಾಜ ಗವಾಯಿ ಅವರ ಹಾರ್ಮೋನಿಯಂ ಕೇಳಿರುವೆ. ಪುಟ್ಟರಾಜರು ಪೇಟಿಯನ್ನು ಶಹನಾಯಿ ದನಿ ಹೊರಡುವಂತೆ ನುಡಿಸಬಲ್ಲವರಾಗಿದ್ದರು. ಕಂಪನಿ ನಾಟಕಗಳು ಶುರುವಾಗುವಾಗ ಗವಾಯಿ ಮಾಸ್ತರನು ಪೇಟಿಯ ಮೇಲೆ ಬೆರಳಾಡಿಸಿದರೆ, ಇಡೀ ಥಿಯೇಟರಿನ ಶಾಬ್ದಿಕ ಕಸವನ್ನೆಲ್ಲ ಕಸಬರಿಕೆ ತೆಗೆದುಕೊಂಡು ಗುಡಿಸಿದಂತಾಗಿ, ಮನಸ್ಸೂ ವಾತಾವರಣವೂ ಶುದ್ಧವಾಗಿ, ರಸಿಕರಿಗೆ ನಾಟಕ ನೋಡಲು ಬೇಕಾದ ಸಹೃದಯ ಮನಃಸ್ಥಿತಿ ಸಿದ್ಧವಾಗುತ್ತದೆ. ಪೇಟಿಯಿಲ್ಲದೆ ನಾಟಕವಿಲ್ಲ. ಹರಿಕತೆಯಿಲ್ಲ. ಸಿನಿಮಾ ಗೀತೆಗಳಿಲ್ಲ. ಭಜನೆಯಿಲ್ಲ. ಭಾರತೀಯಸಂಗೀತದಲ್ಲಿಹಾರ್ಮೋನಿಯಂಸರ್ವಾಂತರ್ಯಾಮಿ.

ಹೀಗೆ ಬಹುರೂಪಿಯಾಗಿ ನೆಲೆಸಿರುವ ಈ ವಾದ್ಯ ಸ್ಥಳೀಕವಲ್ಲ. ಯೂರೋಪಿನಿಂದ ಬಂದಿದ್ದು. ಎಂತಲೇ ಮೊದಲ ವಾರ್ತಾಮಂತ್ರಿ ಬಿ.ವಿ.ಕೇಸ್ಕರ್ ಇದನ್ನು ಆಕಾಶವಾಣಿಯಲ್ಲಿ ನಿಷೇಧಿಸಿದರು. ಆದರೆ ಗೆದ್ದಿದ್ದು ಪೇಟಿಯೇ. ಇದು ವಲಸೆ ಬಂದು ಇಲ್ಲಿನ ಅಗತ್ಯಗಳಿಗೆ ರೂಪಾಂತರ ಪಡೆದ ಕತೆ ರೋಚಕವಾಗಿದೆ. ಇದರ ಜತೆ ಮುಕ್ಕಾಲು ಶತಮಾನ ಕಾಲ ಒಗೆತನ ಮಾಡಿರುವ ಬಿಜಾಪುರೆ ಹೇಳಿದರು: 'ನೋಡ್ರಿ. ಇದು ಪ್ಯಾರಿಸ್ಸಿಂದು. ನಾಟಕಕ್ಕ ಅಂತ ತಂದದ್ದು. ನಮ್ಮ ಹಿಂದೂಸ್ತಾನಿ ಸಂಗೀತಕ್ಕ ಇದರಷ್ಟು ಯೋಗ್ಯ ಟ್ಯೂನಿಂಗ್ ಕೊಡೋದು ಮತ್ತ ಬ್ಯಾರೆ ಯಾವುದೂ ಇಲ್ಲ'.

ಸಂಗೀತ ಕಛೇರಿಯಲ್ಲಿ ತಬಲ ಪೇಟಿ ತಂಬೂರಿ ಮುಂತಾದ ಸಾಥಿದಾರರು ಎಷ್ಟೇ ಪ್ರತಿಭಾವಂತರಿದ್ದರೂ, ಅವರದು ಎರಡನೇ ಸ್ಥಾನ. ಕೇಂದ್ರಬಿಂದು ಹಾಡುಗಾರರು; ವಾದ್ಯಸಂಗೀತವಿದ್ದರೆ ವಾದ್ಯಕಾರರು. ಎರಡನೇ ಸ್ಥಾನದಲ್ಲಿರಬೇಕಾದ ಇಕ್ಕಟ್ಟೇ ಕೆಲವು ಪ್ರತಿಭಾವಂತರನ್ನು ಪ್ರಯೋಗಗಳಿಗೆ ಪ್ರೇರೇಪಿಸಿರಬೇಕು. ತಬಲಾದಲ್ಲಿ ಉಸ್ತಾದ್ ಜಾಕಿರ್ ಹೀಗೆ ರೂಪುಗೊಂಡವರು. ವಿಜಾಪುರೆ ಸ್ವತಂತ್ರವಾಗಿ ಪೇಟಿ ಬಾರಿಸುತ್ತ, ಅದರಲ್ಲಿ ಹಾಡುಗಳನ್ನು ನುಡಿಸುತ್ತಿದ್ದರಂತೆ. ಅದನ್ನು ಗಾಯಕಿ ಶೈಲಿ ಎನ್ನುವರು. "ಹಾರ್ಮೊನಿಯಂ ಹಾಡಿನಂಗ ಬಾರಿಸೋನು ನಾನ ಒಬ್ಬನ ಉಳದೀನಿ. ಹಾಡಿನ ದನಿ ಬರೋಹಂಗ ಇದರ ಮ್ಯಾಲ ಸಂಶೋಧನ ಮಾಡೀನಿ' ಎಂದು ಮಗುವಿನಂತೆ ಬೊಚ್ಚ ಬಾಯಲ್ಲಿ ನಕ್ಕರು.

ನಮಗೆ ಅವರು ಪೇಟಿಯ ಮೇಲೆ ಬೆರಳಾಡಿಸಿ ನಾದ ಹೊಮ್ಮಿಸಿದರೆ, ಕಿವಿಯೊಳಗೆ ಇಳಿಸಿಕೊಂಡು ಹೋಗಬೇಕೆಂಬ ತವಕ. ಆದರೆ ಅದೃಷ್ಟವಿರಲಿಲ್ಲ. ವಿಜಾಪುರೆ ನುಡಿಸಲು ಒಲ್ಲೆನೆಂದರು. ಪಾಠ ಹೇಳಿ ದಣಿದಿದ್ದರೊ ಅರೆಗತ್ತಲೆಯಲ್ಲಿ ಬೇಡವೆನಿಸಿತೊ ತಿಳಿಯದು. 'ಈಗ ಬೇಡ. ತಬಲ ಸಾಥಿಯಿಲ್ಲ. ಇನ್ನೊಮ್ಮೆ ಬರ್ರಿ. ಬೇಕಾದಷ್ಟು ನುಡಸ್ತೀನಿ. ಸದ್ಯ ನನ್ನ ಶಿಷ್ಯರು ಹಾರ. ಅವರು ಹಾಡ್ತಾರ' ಎಂದು ಶಿಷ್ಯರಿಗೆ 'ಭಾಳಾ, ಯೂನಿವರ್ಸಿಟಿಯಿಂದ ಪ್ರೊಫೆಸರ್ ಮಂದಿ ಬಂದಾರ. ಥೋಡ ಹಾಡ್ರಿ' ಎಂದರು. ಕೇಳಿದರೆ ತಮ್ಮ ಕರುಳನ್ನೂ ಬಗೆದುಕೊಡುವಷ್ಟು ಭಕ್ತಿ ತುಂಬಿದಂತಿದ್ದ ಆ ತರುಣ- ತರುಣಿ, ಗುರುವಿನಪ್ಪಣೆ ನೆರವೇರಿಸುತ್ತಿರುವ ಆನಂದವನ್ನೂ ಅಪರಿಚಿತರ ಮುಂದೆ ಹಾಡುವ ಸಂಕೋಚವನ್ನೂ ಸೂಸುತ್ತ, ತಲಾ ಒಂದೊಂದು ಅಭಂಗ ಹಾಡಿದರು. ಅದೇ ಹೊತ್ತಿಗೆ ಸಂಗೀತಪಾಠದಿಂದ ಮಗಳನ್ನು ಕರೆದೊಯ್ಯಲು ಬಂದಿದ್ದ ಒಬ್ಬ ತಾಯಿ, ಕರುಳಕುಡಿ ಹಾಡುವುದನ್ನು ಮರೆಯಲ್ಲಿ ನಿಂತು ನೋಡುತ್ತ ಆನಂದ ಪಡುತ್ತಿದ್ದುದು ಮಬ್ಬುಬೆಳಕಲ್ಲೂ ಫಳಫಳಿಸುತ್ತಿತ್ತು. ಕೊಟ್ಟ ಗುಟುಕನ್ನು ತುಪ್ಪುಳಿಲ್ಲದ ಮರಿಗಳು ನಿಶ್ಚಿಂತ ನುಂಗುವುದನ್ನು ನೋಡುವ ತಾಯ್ ಹಕ್ಕಿಯಂತೆ, ಮಡಿಲಲ್ಲಿ ಮಲಗಿದ ಕೂಸು ತಾನಾಡುವ ಮಾತುಗಳನ್ನು ತೊದಲುತೊದಲಾಗಿ ಅನುಕರಿಸುತ್ತ ಉಚ್ಚರಿಸುವುದನ್ನು ಗಮನಿಸುವ ಅಜ್ಜಿಯಂತೆ, ಬಿಜಾಪುರೆ ಆನಂದದಿಂದ ಶಿಷ್ಯರ ಮುಖಗಳನ್ನೇ ತದೇಕ ನೋಡುತ್ತಿದ್ದರು.

ಚಹಾ ಬಂತು. ಸಂಗೀತ ಕೇಳಲಾಗದ ನಿರಾಸೆಯಲ್ಲಿ ಸೇವಿಸುತ್ತಿರುವಾಗ, ಬಿಜಾಪುರೆ ನಮ್ಮ ಮುಖವನ್ನು ಓದಿದರೊ ಎಂಬಂತೆ "ಈಗ ಗುರ್ತಾಯ್ತಲ್ಲ, ಮತ್ತೊಮ್ಮೆ ಬರ್ರಿ. ಇಡೀ ದಿವಸ ಬೇಕಾರ ಕೂಡೋಣು. ಬೇಕಾದಂಗ ಬಾರಸ್ತೀನಿ. ಇನ್ನ ಕರ್ನಾಟಕದೊಳಗ ಗಂಗೂಬಾಯಿ ನಾನೂ ಏಣಗಿ ಬಾಳಪ್ಪ ಮೂವರಿದ್ದಿವಿ. ಗಂಗೂಬಾಯಿ ಹ್ವಾದಳು. ನಾವಿಬ್ಬರು ಉಳದೀವಿ' ಎಂದರು. ನಮಗೆ ಮತ್ತೆ ಹೋಗಲು ಆಗಲಿಲ್ಲ.

ಮುಂದೊಂದು ದಿನ ಬಿಜಾಪುರೆ (1917-2010) ಕಳಿತ ಎಲೆ ಚಳಿಗಾಲದಲ್ಲಿ ಸಣ್ಣಸಪ್ಪಳ ಹೊರಡಿಸಿ ಹಗೂರಾಗಿ ನೆಲಕ್ಕೆ ಇಳಿಯುವಂತೆ ಹೋಗಿಬಿಟ್ಟರು. ಅವರ ಹಾರ್ಮೊನಿಯಂ ಕೇಳುವ ಬಯಕೆ ಮಾತ್ರ ಬಾಕಿ ಉಳಿದುಬಿಟ್ಟಿತು. ಆಕಸ್ಮಿಕವಾಗಿ ಸಿಗುವ ಅನುಭವಗಳು ಬದುಕಿಗೆ ಹೊಸ ತಿರುವನ್ನು ಕೊಡುತ್ತವೆ; ಕಳೆದುಕೊಂಡ ಅವಕಾಶಗಳು ಮತ್ತೆಂದೂ ಸಿಗದಂತಾಗಿ ಜೀವನವಿಡೀ ಕಾಡುತ್ತವೆ. ಆದರೆ ಕೇಳಲಾಗದೆ ಹೋದ ಸಂಗೀತವು ಕಲ್ಪನೆಯೊಳಗೆ ಬಂದು ಹಲವು ನಾದಗಳಲ್ಲಿ ಮರುಹುಟ್ಟು ಪಡೆಯುತ್ತಿರುತ್ತದೆ. ಕಲ್ಪನೆಯಲ್ಲಿ ಹುಟ್ಟುವ ನಾದಕ್ಕೆ ವಿಶಿಷ್ಟ ಮಾಧುರ್ಯವೂ ಇರುತ್ತದೆ.

# ಚುನಾವಣೆ ಮತಗಟ್ಟೆ ಸಿಬ್ಬಂದಿಗೆ ಅಂತಿಮ ಹಂತದ ತರಬೇತಿ

ಮೊದಲ ಪುಟದಿಂದ

ನಿಯಮಾನುಸಾರ ಮಾಡಬೇಕು ಎಂದು ನಾನಾ ವಿಷಯಗಳ ಬಗ್ಗೆ ಚುನಾವಣಾ ತರಬೇತುದಾರರು ಮತಗಟ್ಟೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ತಿಳಿಸಿದರು.

ಲೋಕಸಭಾ ಚುನಾವಣೆಯ ಸಾಮಾನ್ಯ ವೀಕ್ಷಕರಾದ ಚಂದ್ರಶೇಖರ ಸಖಮುರಿ, ಪೊಲೀಸ್ ವೀಕ್ಷಕರಾದ ಧರ್ಮೆಂದ್ರ ಸಿಂಗ್ ಭದೌರಿಯಾ, ಜಿಲ್ಲಾ ಚುನಾವಣಾಧಿಕಾರಿ ಎಂ.ಎಸ್.ದಿವಾಕರ, ಅಪರ ಜಿಲ್ಲಾಧಿಕಾರಿ ಅನುರಾಧ ಜಿ, ಸಹಾಯಕ ಆಯುಕ್ತರು, ತಹಶೀಲ್ದಾರರು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ನಡೆದ ತರಬೇತಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು.









ಕವಿ ಮನಸು

## ಹೃದಯ

ನನ್ನ ಹೃದಯ ಬಾಳ ಚಿಕ್ಕದು
ಬಾಳ ಜೋಪಾನ ಮಾಡ್ತಿನಿ
ಕುಂದು ಕೊರತೆ ಮಾಡಾಂಗಿಲ್ಲ
ಚೆಂದಾಗಿ ಇರ್ಲಿಂತ ಬೇಡ್ಕೊಂತಿನಿ॥

ಯಾರರ ಏನಾರ ಅಂದ್ರ
ಬಾಳ ಬ್ಯಾಸ್ರ ಬಾಡ್ಕೊಂತ್ತೈತಿ
ಯಾರು ಏನೂ ಅನ್ಬಾರ್ದಂತ
ಅನ್ನವರಿಂದ ದೂರ ಇರ್ತಿನಿ॥

ನಾ ಒಳ್ಳೆ ಕೆಲ್ಸ ಮಾಡಿದ್ರ
ಬಾಳ ಖುಷಿ ಪಡ್ತದ
ಒಳ್ಳೆ ಕೆಲ್ಸ ಮಾಡ್ಬೇಕಂತ
ಅಲ್ಲಲ್ಲಿ ಹುಡುಕ್ತಾ ಇರ್ತಿನಿ॥

ನನ್ನ ಹೃದಯಕ್ಕ ಘಾಸಿಯಾಗ್ದಂಗ
ನಿತ್ಯ ಜಾಗೃತೆ ವಹಿಸ್ತಾನೆ ಇರ್ತಿನಿ
ಒಮ್ಮೆಮ್ಮೆ ನನ್ಗ ಗೊತ್ತಾಗ್ದಂಗ
ನನ್ನ ಹೃದಯ ಬ್ಯಾಸ್ರಾ ಮಾಡ್ಕೊಂತೈತಿ॥

ನನಗೂ ಸ್ನೇಹಿತರ ಬಳ್ಗ ಬೇಕನ್ಸತ್ತ
ಕೈ ಕೊಟ್ರ ಹೃದಯಕ್ಕ ಬ್ಯಾಸ್ರಾಗೈತಿ
ಹೃದಯಕ್ಕ ಬ್ಯಾಸ್ರ ಮಾಡ್ದಾಂಗ
ಇರೋರ್ನ ನಾ ಇನ್ನೂ ಹುಡುಕಾಹತ್ತಿನಿ॥

ನಾ ಕೆಟ್ಟ ಕೆಲ್ಸ ಮಾಡ್ದಾಂಗ
ನನ್ನ ಹೃದಯ ಬುದ್ದಿ ಹೇಳ್ತೈತಿ
ಹೃದಯ ಹೇಳ್ದಂಗ ಕೇಳ್ತಿನಂತ
ನಾ ಇನ್ನೂ ಬದುಕಿ ಉಳ್ದಿನಿ॥

ಹೃದಯ ಚಿಕ್ಕದಂತ ತಾಚ್ಚಾರ ಮಾಡ್ಬೇಡ್ರಿ
ಹೃದಯ ನೀವ್ ಕಾಯ್ಕೊಂಡಿದ್ರ
ನಿಮ್ಮನ್ ಹೃದಯ ಸದಾ ಕಾಯ್ತದ
ನೂರು ವರ್ಷ ಬದುಕಾಕ ಗ್ಯಾರಂಟಿ
ಕೊಡ್ತದ॥

ಇತ್ತಿತ್ಲಾಗಿ ಅದೇನಾ ಕೊರೋನಾ ಅಂತ
ಸರ್ಕಾರದ ಆದೇಶ ಪಾಲಿಸಬೇಕಂತ
ಮಾಸ್ಕ್ ಹಾಕ್ಕೊಂಡು ಅಂತ್ರ ಕಾಯ್ಬೇಕಂತ
ಮಾಡೋಣ ಎಲ್ಲಕ್ಕಿಂತ ಜೀವ ದೊಡ್ಡದಲ್ಲ॥

– ಚಂದ್ರಶೇಖರಯ್ಯ ರೋಣದಮಠ

## ನಾವು ಕಾರ್ಮಿಕರು

ಕುಡುಗೋಲು ಹಿಡಿದು
ಕಳೆ ಕಸವ ತೆಗೆವೆವು
ನಾವು ಶ್ರಮಿಕ ಕಾರ್ಮಿಕರು

ಪೊರಕೆ ಬಾರಿಗೆ ಹಿಡಿದು
ಊರರ ರಸ್ತೆ ಸ್ವಚ್ಛಗೈವೆವು
ನಾವು ಶ್ರಮಿಕ ಕಾರ್ಮಿಕರು

ಕಲ್ಲು ಜೆಲ್ಲಿ ಪುಟ್ಟಿ ಹೊತ್ತು
ಕಟ್ಟಡ ಬಂಗ್ಲೆ ಕಟ್ಟುವೇವು
ನಾವು ಶ್ರಮಿಕ ಕಾರ್ಮಿಕರು

ಮಸಿ ಅರಿವೆ ಹಿಡಿರ್ವೇವು
ಹೊಟೇಲ್ ಟೇಬಲ್ ವರೆಸುರ್ವೇವು
ನಾವು ಶ್ರಮಿಕ ಕಾರ್ಮಿಕರು

ಲಾರಿ ಸರಕುಗಳ ಹೊತ್ತು
ಏರಿಸುವೇವು ಇಳಿಸುವೇವು
ನಾವು ಶ್ರಮಿಕ ಕಾರ್ಮಿಕರು

ಊರೂರ ಜನರನು ಆಟೋದಲಿ
ಅವರವರ ಸ್ಥಳಕೊಯ್ಯುವೇವು
ನಾವು ಶ್ರಮಿಕ ಕಾರ್ಮಿಕರು

ಗೋಮಾಳ ಬಯಲಲಿ
ಜಾನವಾರು ಮೇಯಿಸುವೇವು
ನಾವು ಶ್ರಮಿಕ ಕಾರ್ಮಿಕರು

ಕಾರ್ಖಾನೆ ಯಂತ್ರಗಳಲಿ
ವಿವಿಧ ಬಗೆಯಲಿ ದುಡಿವೇವು
ನಾವು ಶ್ರಮಿಕ ಕಾರ್ಮಿಕರು

ದುಡಿತ ಮಿಡಿತವೇ ಬದುಕು
ಶ್ರಮ ಕ್ರಮದ ಬೇವರ ಬದುಕು
ನಾವು ಶ್ರಮಿಕ ಕಾರ್ಮಿಕರು

– ಸೋ.ದಾ.ವಿರೂಪಾಕ್ಷಗೌಡ ಹೊಸಪೇಟೆ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಪಾಗಲ್ ಪ್ರೇಮಿಗೆ ಇವ್ಯಾವುವೂ ಗೊತ್ತಿರಲಿಲ್ಲ..



ಆತ ಅಕೆಯಲ್ಲಿ, ಈಕೆ ಆತನಲ್ಲಿ ಕರಗಿ ಒಂದಾಗಿದ್ದರು. ಪ್ರೇಮ ಕುರುಡು..ಅದನ್ನು ಸಾಬೀತುಮಾಡಿದ್ದರು..

ಹರೆಯದ, ಮೋಹದ ಪೊರೆ ನಿಧಾನವಾಗಿ ಕಳಚುತ್ತಾ ಹೋಯ್ತು...ಆತನ ನಿಜ ರೂಪ ಈಕೆಗೆ ಗೋಚರಿಸತೊಡಗಿತು..

ಆತ ತ್ಯಾಗಿ,ಪಾಗಲ್ ಪ್ರೇಮಿಯಾಗಿದ್ದವ ಓರ್ವ ಮಾದಕ ವ್ಯಸನಿ,ಮನೆಯ ಕಡೆ ಏನೇನೂ ಇಲ್ಲದವ ಲಾವಾರಿಸ್,ಮಾಡಲು ಕೆಲಸ ಇಲ್ಲ. ಅರಸಿ ಬಂದು ಆಕೆಯನ್ನು ಮನಸೋ ಇಚ್ಛೆ ಸವಿದು ನಿರಮ್ಮಳಾಗಿ ಮಲಗಿಬಿಡುತ್ತಿದ್ದ.ನಾಳೆಯ ಚಿಂತೆ ಇಲ್ಲದವ..ಮನೆಯಲ್ಲಿ ತೀರಲಾರದಷ್ಟು ಸಮಸ್ಯೆ, ಸಾಲ..ದಾಡಿ ಬಿಟ್ಟು ಮೂರ್ನಾಲ್ಕು ಪೋಲಿಗಳ ಜೊತೆ ಅಲೆದು ಚೀಪ್ ಲಿಕ್ಕರ್ ಕುಡಿದು ಈಕೆಯನ್ನರಸಿ ಬರುತ್ತಿದ್ದ,ಅವಳೆದೆಯಲ್ಲಿ ಮುಖ ಹುದುಗಿಸಿ ಸಮಸ್ಯೆಗಳನ್ನೆಲ್ಲಾ ಉಸುರಿ ಅವಳನ್ನನ್ನುಭವಿಸಿ ನಿರಾಳವಾಗಿ ನೆಲಕ್ಕೆ ಬೀಳುತ್ತಿದ್ದ..

ಆಕೆ ಅವನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು,ಅವನೂ ಅಷ್ಟೇ.. ನಾಲ್ಕುವರ್ಷಕ್ಕೆ ಸ್ವಲ್ಪ ಸ್ವಲ್ಪ ಪ್ರೇಮ ಮಾಸುತ್ತಾ ಬರತೊಡಗಿತು..ಅವನು ಆಕೆಯನ್ನು ಅನುಭವಿಸಲು ಅರಸಿ ಬರುತ್ತಿದ್ದನೇ ವಿನಃ ಅಕೆಯ ಭವಿಷ್ಯದ ಬಗ್ಗೆ ಎಂದೂ ಯೋಚಿಸಿರಲಿಲ್ಲ..ಅನುಭವಿಸಲೆಂದೇ ಆಗಿದ್ದರೆ ಸಾವಿರಾರು ಜನ ಇದ್ದಾರೆ ಅದೇ ಕೆಲಸಕ್ಕೆ, ಅದಕ್ಕೆ ನಾನೇ ಬೇಕೇನು?ಎಂದು ಅವಳ ಮನ ನುಡಿಯುತ್ತಿತ್ತು...

ತನಗೂ ವಯಸ್ಸಾಗುತ್ತಾ ಬರುತ್ತಿದೆ.ಮನೆಗೆ ಸಂಬಂಧಗಳು ಹುಡುಕಿಕೊಂಡು ಬರುತ್ತಿವೆ. ಇತ್ತೀಚೆಗೆ ತನ್ನ ಭವಿಷ್ಯದ ಬಗ್ಗೆ ಅಕೆಗೆ ಯೋಚನೆಗಳು ಮೂಡತೊಡಗಿದ್ದವು..ಆಗ ಮದುವೆಯೇ ಬೇಡ ಅನ್ನುತ್ತಿದ್ದವಳು ಅವರಮ್ಮನ ತೆಕ್ಕೆಗೆ ಅಂಟಿಕೊಂಡು ನಿನ್ನ ಇಷ್ಟ ಮಮ್ಮಿ ಅಂದಿದ್ದಳು.ಅವಳ ಮಮ್ಮಿಗೆ ಖುಷಿಯೋ ಖುಷಿ.ಆದರೆ ಅವನನ್ನು Avoid ಮಾಡುವುದು ಹೇಗೆ? ಬರುಬರುತ್ತಾ ಅಸಹಕಾರ ಅಸಹನೆ ಅವನ ಬಗ್ಗೆ ಅವಳ ಮನದಲ್ಲಿ ಶುರುವಾದವು.. ಕುಡಿದು ಬಂದು ಅವಳ ಮುಖಕ್ಕೆ ಮುಖ ಸೇರಿಸಿದಾಗ ಛೀ,ಅಸಹ್ಯ ಅಂದಳು.. ಅವಳೆಂದೂ ಹೀಗಂದಿರಲಿಲ್ಲ.whatn a strange ಅಂದು ಅವನು ಗಾಬರಿಯಾಗಿದ್ದ..

ಅವಳು ಅವನ ಸಂಗ ಹಾಗೂ ಸನಿಹದಿಂದ ದೂರ ಸರಿಯತೊಡಗಿದಳು...



ಮಹಿಮ
ಲೇಖಕರು, ರಾಯಚೂರು
Scan For Digital Colourful
HAMPI TIMES E-paper

ವರ ಬಂದ..ಮುದ್ದಾದವ..ಕೈ ತುಂಬಾ ಸಂಬಳ.ಒಂದೇ ನೋಟಕ್ಕೆ ಇವಳನ್ನು ಒಪ್ಪಿ ವಿವಾಹದ ದಿನವನ್ನೂ ಸಹ ಗೊತ್ತು ಮಾಡಿಕೊಂಡು ಹೋದ..

ಪಾಗಲ್ ಪ್ರೇಮಿಗೆ ಇವ್ಯಾವುವೂ ಗೊತ್ತಿರಲಿಲ್ಲ.. ಇತ್ತೀಚೆಗೆ ಅವಳು ಇವನಿಗೆ ಸಿಗುವುದೇ ದುಸ್ತರವಾಗಿತ್ತು...

ಅವನ ನಂಬರ್ ಬ್ಲಾಕ್ ಲಿಸ್ಟ್ ಗೆ ಬಿತ್ತು..ಬರುಬರುತ್ತಾ ಅವನು ಮಾಸುತ್ತಾ ಹೋದ.. ಮದುವೆ ಆಗೇ ಹೋಯ್ತು...

ಮೊದಲ ರಾತ್ರಿ ವಗೈರೆ ಮುಗಿದವು.. ಗಂಡನ ಮನೆಗೆ ಸಂಭ್ರಮ ಸಡಗರದಿಂದ ಆಕೆ ಹೊರಟಳು..ಬೆಂಜ್ ಕಾರು,ಸೂಟು ಬೂಟು ಹಾಕಿದ ಗಂಡ ವಾಹನ ಚಾಲನೆ ಮಾಡುತ್ತಿದ್ದ..ಜಾಲಿ ರೈಡ್..

ಹತ್ತಿಪ್ಪತ್ತು ಕಿಲೋಮೀಟರ್ ಚಲಿಸಿದ ವಾಹನ ಇದ್ದಕ್ಕಿದ್ದಂತೆ ಆಫ್ ಆಯ್ತು..ಗಂಡ ಕೆಳಗಡೆ ಇಳಿದು ಇಂಜಿನ್ ನೊಳಗೆ ಇಣುಕಿ ನೋಡುತ್ತಿದ್ದ..

ಅದು ಆಗಿದ್ದು ಟೋಲ್ ಗೇಟ್ ಸನಿಹದಲ್ಲಿಯೇ..ವಿಪರೀತ ವಾಹನಗಳು, ಜನಸಂದಣಿ.. ಅಲ್ಲಿ ಓರ್ವ ವ್ಯಕ್ತಿ ನೀರಿನ ಪೌಚ್ ಗಳನ್ನು ಹಿಡಿದು ಸಾರ್ ಐದು ರೂಪಾಯಿಗೆ ಒಂದು ಪೌಚ್ ತಣ್ಣನೆಯ ನೀರು ಸಾರ್ ಅನ್ನುತ್ತಾ ಅತ್ತಿಂದಿತ್ತ ಇತ್ತಿಂದತ್ತ ಅಡ್ಡಾಡುತ್ತಿದ್ದ.ಮಾಸಿದ ಹರುಕಲು ಅಂಗಿ,ಬೆಳಸಿದ ಗಡ್ಡ ಮೀಸೆಗಳು...ಹೌದು ಅವನೇ ಅವನೇ..ಅಯ್ಯೋ ಅವನು ಈ ಸುಂದರ ಕ್ಷಣದಲ್ಲಿ ನನ್ನ ಕಣ್ಣಿಗೆ ಬೀಳಬೇಕೇ? ಅವಳ ಶಕ್ತಿ ಉಡುಗಿದಂತಾಯ್ತು.. ಮುಖವನ್ನು ಸಂಪೂರ್ಣವಾಗಿ ಮುಚ್ಚಿಕೊಂಡು ಅವನನ್ನು ಸನ್ನೆ ಮಾಡಿ ಕರೆದಳು.. ಅವನು ಓಡೋಡಿ ಬಂದ "ಹತ್ತು ಪೌಚ್ ಕೊಡು "ಅಂದು ಐವತ್ತು ರೂಪಾಯಿ ಅವನಿಗೆ ಕೊಟ್ಟಳು..
ಅವನಿಗೆ ಖುಷಿಯೋ ಖುಷಿ..ಪೌಚ್ ಕೊಟ್ಟು

**"ನಮಸ್ತೇ ಮೇಡಂ "**
**ಅಂದ..**
**"ಇಗೋ ಬಾ ಇಲ್ಲಿ ಹಿಡಿ ಇದನ್ನು"**
**ಅಂತ ಐದು ಸಾವಿರ ಹಣ ಅವನ ಕೈಗಿತ್ತು**
**"ನಯಾ ಡ್ರೆಸ್ ಲೇಲೋ "**
**ಅಂದಳು..**
**ಅವನು" ಬೇಡ ಮೇಡಂ" ಅಂದ..**

"ನೀವ್ಯಾರು, ಕಾಸು ಯಾಕೆ ಕೊಡ್ತಿದ್ದೀರಿ "ಗಾಬರಿಯಿಂದ ಕೇಳಿದ.. "ಇರಲಿ ತಗೋ, ನಿನಗೆ ಕುಡಿತದ ಚಟ ಇದ್ದರೆ ಇಂದೇ ಬಿಟ್ಟು ಬಿಡು. ಒಳ್ಳೆಯ ಡ್ರೆಸ್ ತಗೋ ಬದಲಾಗು ಬೈ " ಅಂದಳು..ಅವನು ಅವಾಕ್ಕಾದ.. ಕಾರ್ start ಆಯ್ತು..

# ಮೇ 01 ರಿಂದ ಮುಂದಿನ 5 ದಿನಗಳವರೆಗೆ ತೀವ್ರ ಶಾಖದ ಅಲೆ

■ ಹಂಪಿ ಟೈಮ್ಸ್ ಬಳ್ಳಾರಿ

ರಾಜ್ಯದಲ್ಲಿ ಮೇ 01 ರಿಂದ ಮುಂದಿನ 5 ದಿನಗಳವರೆಗೆ ದಿನವಾರು ಶಾಖದ ಅಲೆ ಹೆಚ್ಚಳವಾಗುತ್ತಿದ್ದು, ಸಾರ್ವಜನಿಕರು ಅಗತ್ಯ ಮುಂಜಾಗ್ರತೆ ಕ್ರಮ ವಹಿಸಬೇಕು ಎಂದು ಭಾರತ ಹವಮಾನ ಇಲಾಖೆಯು ತಿಳಿಸಿದೆ.

ಮೇ 01 ರಿಂದ 05 ರ ವರೆಗೆ ರಾಜ್ಯದ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಜಿಲ್ಲೆಗಳಲ್ಲಿ ತೀವ್ರ ಶಾಖದ ಅಲೆಯ ಪರಿಸ್ಥಿತಿಗಳು ಚಾಲ್ತಿಯಲ್ಲಿರುವ ಸಾಧ್ಯತೆಯಿದೆ. ಬಳ್ಳಾರಿ, ಕಲಬುರ್ಗಿ, ವಿಜಯಪುರ, ರಾಯಚೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ತುಮಕೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಶಾಖದ ಅಲೆಯ ಮೇಲುಗೈ ಸಾಧಿಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೇ 01 ರಿಂದ 05 ರ ವರೆಗೆ ಬಿಸಿ ಮತ್ತು ಆದ್ರ್ರ ಪರಿಸ್ಥಿತಿಗಳು ಮೇಲುಗೈ ಸಾಧಿಸುವ ಸಾಧ್ಯತೆಯಿದೆ. ಮುಂದಿನ 5 ದಿನಗಳ ಕಾಲ ಉತ್ತರ ಕರ್ನಾಟಕದ ಒಳಭಾಗದಲ್ಲಿ ಬೆಚ್ಚಗಿನ ರಾತ್ರಿ ಉಂಟಾಗುವ ಸಾಧ್ಯತೆಯಿದೆ. ಇದೇ ರೀತಿಯ ಗರಿಷ್ಠ ತಾಪಮಾನದ ಪರಿಸ್ಥಿತಿಗಳು ಮುಂದಿನ 5 ದಿನಗಳವರೆಗೆ ರಾಜ್ಯದಾದ್ಯಂತ ಮುಂದುವರಿಯುವ ಸಾಧ್ಯತೆಯಿದೆ ಎಂದು ಭಾರತ ಹವಮಾನ ಇಲಾಖೆಯು ಹೇಳಿದೆ.


### ಸನ್‌ಸ್ಟ್ರೋಕ್‌ನಿಂದ ಪೀಡಿತ ವ್ಯಕ್ತಿಯ ಚಿಕಿತ್ಸೆಗಾಗಿ ಸಲಹೆಗಳು:

ವ್ಯಕ್ತಿಯನ್ನು ತಂಪಾದ ಸ್ಥಳದಲ್ಲಿ, ನೆರಳಿನ ಕೆಳಗೆ ಇರಿಸಿ. ಅವರನ್ನು ಒದ್ದೆ ಬಟ್ಟೆಯಿಂದ ಒರೆಸಿ, ಆಗಾಗ ದೇಹವನ್ನು ತೊಳೆಯಿರಿ. ತಲೆಯ ಮೇಲೆ ಸಾಮಾನ್ಯ ತಾಪಮಾನದ ನೀರನ್ನು ಸುರಿಯಿರಿ. ದೇಹದ ಉಷ್ಣತೆಯನ್ನು ಕಡಿಮೆ ಮಾಡುವುದು ಮುಖ್ಯ ವಿಷಯ. ವ್ಯಕ್ತಿಗೆ ಓಆರ್‌ಎಸ್ ಕುಡಿಯಲು ಅಥವಾ ನಿಂಬೆ ಶರಬತ್, ತೋರಣಿ ಅಥವಾ ದೇಹವನ್ನು ಪುನರ್ಜಲೀಕರಣಗೊಳಿಸಲು ಉಪಯುಕ್ತವಾದ ಯಾವುದನ್ನಾದರೂ ನೀಡಬೇಕು. ತಕ್ಷಣ ವ್ಯಕ್ತಿಯನ್ನು ಹತ್ತಿರದ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿ. ರೋಗಿಗೆ ತಕ್ಷಣದ ಆಸ್ಪತ್ರೆಗೆ ಅಗತ್ಯವಿರುತ್ತದೆ, ಏಕೆಂದರೆ ಶಾಖದ ಹೊಡೆತಗಳು ಮಾರಣಾಂತಿಕವಾಗಬಹುದು.

ಅಪಾಯದಲ್ಲಿರುವ ಜನರು ತಂಪಾದ ವಾತಾವರಣದಿಂದ ಬಿಸಿ ವಾತಾವರಣಕ್ಕೆ ಬಂದವರು. ಶಾಖದ ಅಲೆಯ ಸಮಯದಲ್ಲಿ ನಿಮ್ಮ ಕುಟುಂಬಕ್ಕೆ ಅಂತಹ ವ್ಯಕ್ತಿ(ರು) ಭೇಟಿ ನೀಡುತ್ತಿರಬಹುದು. ದೇಹವು ಶಾಖಕ್ಕೆ ಒಗ್ಗಿಕೊಳ್ಳುವವರೆಗೆ ಅವರು ಒಂದು ವಾರದವರೆಗೆ ತೆರೆದ ಮೈದಾನದಲ್ಲಿ ಚಲಿಸಬಾರದು ಮತ್ತು ಸಾಕಷ್ಟು ನೀರು ಕುಡಿಯಬೇಕು. ಶಾಖ ತರಂಗದ ಸಮಯದಲ್ಲಿ ಬಿಸಿ ವಾತಾವರಣಕ್ಕೆ ಕ್ರಮೇಣ ಒಡ್ಡಿಕೊಳ್ಳುವುದರಿಂದ ಒಗ್ಗಿಕೊಳ್ಳುವಿಕೆಯನ್ನು ಸಾಧಿಸಲಾಗುತ್ತದೆ.

### ಶಾಖಾಘಾತದ ಬಿಸಿಗಾಳಿಗೆ ಸಲಹೆಗಳು:

**ಸಾಮಾನ್ಯ ಜನರಿಗೆ:** ವಿಶೇಷವಾಗಿ ಮಧ್ಯಾಹ್ನ 12 ರಿಂದ 3 ರವರೆಗೆ ಬಿಸಿಲಿನಲ್ಲಿ ಹೋಗುವುದನ್ನು ತಪ್ಪಿಸಿ. ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಿರಿ. ಸಾಧ್ಯವಾದಷ್ಟು ಹಗುರವಾದ, ತಿಳಿ ಬಣ್ಣದ, ಸಡಿಲವಾದ ಮತ್ತು ರಂಧ್ರವಿರುವ ಹತ್ತಿ ಬಟ್ಟೆಗಳನ್ನು ಧರಿಸಿ. ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಛತ್ರಿ, ಟೋಪಿ, ಬೂಟುಗಳು ಅಥವಾ ಚಪ್ಪಲ್‌ಗಳನ್ನು ಬಳಸಿ. ಹೊರಗಿನ ತಾಪಮಾನ ಹೆಚ್ಚಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸಿ. ಮಧ್ಯಾಹ್ನ 12 ರಿಂದ 3 ಗಂಟೆಯವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಬೇಕು.



ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳನ್ನು ತಪ್ಪಿಸಬೇಕು. ನೀವು ಹೊರಗೆ ಕೆಲಸ ಮಾಡು ತ್ತಿದ್ದರೆ, ಟೋಪಿ ಅಥವಾ ಛತ್ರಿ ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈ ಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಬಳಸಿ. ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳನ್ನು ಅಥವಾ ಸಾಕುಪ್ರಾಣಿಗಳನ್ನು ಬಿಡಬೇಡಿ. ನಿಮಗೆ ಮೂರ್ಛೆ ಅಥವಾ ಅನಾರೋಗ್ಯ ಅನಿಸಿದರೆ, ತಕ್ಷಣ ವೈದ್ಯರನ್ನು ಭೇಟಿ ಮಾಡಿ. ಓಆರ್‌ಎಸ್ ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ, ತೋರಣಿ (ಅಕ್ಕಿ ನೀರು), ನಿಂಬೆ ನೀರು, ಮಜ್ಜಿಗೆ ಇತ್ಯಾದಿಗಳನ್ನು ಬಳಸಿ ದೇಹವನ್ನು ಮರು-ಜಲೀಕರಣ ಮಾಡಲು ಸಹಾಯ ಮಾಡುತ್ತದೆ.

ಪ್ರಾಣಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಿ. ನಿಮ್ಮ ಮನೆಯನ್ನು ತಂಪಾಗಿ ಇರಿಸಿ, ಪರದೆಗಳು, ಶಟರ್‌ಗಳು ಅಥವಾ ಸನ್‌ಶೆಡ್‌ಳನ್ನು ಬಳಸಿ ಮತ್ತು ರಾತ್ರಿಯಲ್ಲಿ ಕಿಟಕಿಗಳನ್ನು ತೆರೆಯಿರಿ. ಫ್ಯಾನ್, ಒದ್ದೆ ಬಟ್ಟೆಗಳನ್ನು ಬಳಸಿ ಮತ್ತು ಆಗಾಗ ತಣ್ಣೀರಿನಲ್ಲಿ ಸ್ನಾನ ಮಾಡಬಹುದು.

### ರೈತರು, ಕೃಷಿ ಕಾರ್ಮಿಕರು:

ನೀವು ಹೊಲದಲ್ಲಿ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿ ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈ ಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಬಳಸಿ. ಪ್ರಯಾಣಿಸುವಾಗ, ನಿಮ್ಮೊಂದಿಗೆ ನೀರಿನ ಬಾಟಲಿಯನ್ನು ಇರಿಸಿಕೊಳ್ಳಬೇಕು ಎಂದು ಭಾರತ ಹವಮಾನ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

# ಮನೆ ಕೆಲಸ

■ ಸುವರ್ಣಾ ಭಟ್ಟ

ಆರು ಘಂಟೆಗೆ ಅಲರಾಮ್ ಬಡಿದ ಸದ್ದಿಗೆ ದಿಗ್ಗನೆ ಎದ್ದು ಕುಳಿತಳು ವಿಂಧ್ಯ. ಕರಾಗ್ರೆ ವಸತೆ ಲಕ್ಷ್ಮೀ ........ಎಂದು ದೇವರ ಪ್ರಾರ್ಥಿಸಿ ಹಾಸಿಗೆ ವಸ್ತ್ರ ಮಡಿಸಿಟ್ಟು ಎದ್ದು ನಿತ್ಯ ಕರ್ಮ ಮುಗಿಸಿ , ಅಡುಗೆ ಮನೆ ಪ್ರವೇಶಿಸಿ ಕುಡಿಯಲು ಬಿಸಿ ನೀರು ಕಾಯಿಸಿಟ್ಟು, ಒಲೆಗೆ ಕಟ್ಟಿಗೆ ಹಾಕಿ ಬೆಂಕಿ ಉರಿಸಿ ನೀರು ಕಾಯಿಸಿ, ಹೊಸ್ತಿಲ ತೊಳೆದು ರಂಗೋಲಿ ಹಾಕಿ ಅತ್ತೆ ಮಾವನಿಗೆ ಕುಡಿಯಲು ಕಾಫಿ ಕೊಟ್ಟು ಗಂಡನ ಎಬ್ಬಿಸಿದಳು.

ಮಕ್ಕಳಿಗೆ ಶಾಲೆಗೆ ತೆಗೆದುಕೊಂಡು ಹೋಗಲು ಪಲಾವ್ ತಯಾರಿಸಿ, ಎಲ್ಲರಿಗೂ ಬೆಳಿಗ್ಗೆ ತಿಂಡಿಗೆ ದೋಸೆ ಮಾಡಲು ಆರಂಭಿಸಿದಳು. ದೋಸೆ ಮಾಡಿ ಮನೆಯವರಿಗೆ ಕಾಯುತ್ತಾ! ಕುಳಿತರು ಸರಿಯಾದ ಸಮಯಕ್ಕೆ ತಿಂಡಿಗೆ ಯಾರು ಬರಲಿಲ್ಲ. ಎರಡು – ಮೂರು ಬಾರಿ ಕೂಗಿ ಕರೆದ ನಂತರ ಮನೆಯ ಸದಸ್ಯರ ಆಗಮನವಾಯಿತು.



"ಎಲ್ಲರ ತಿಂಡಿ ಮುಗಿಸಿ ಮಕ್ಕಳ ಎಬ್ಬಿಸಲು ಮಕ್ಕಳ ಕೋಣೆಗೆ ಹೋದಳು. ಎಬ್ಬಿಸಿದಷ್ಟು ಮತ್ತೆ ಮತ್ತೆ ಕಣ್ ಮುಚ್ಚಿ ಮಲಗುವ ಮಕ್ಕಳ ನೋಡಿ ಸಿಟ್ಟು ಬಂದರು ತಡೆದುಕೊಂಡು ಇಬ್ಬರನ್ನೂ ಎಬ್ಬಿಸಿಕೊಂಡು ಬಂದು ಹಲ್ಲುಜ್ಜಿ, ಸ್ನಾನ ಮಾಡಿಸಿ ತಿಂಡಿಯ ತಟ್ಟೆ ಮುಂದಿಟ್ಟಾಗ ದೋಸೆ ಬೇಡ, ಪೂರಿ ಬೇಕು ಎಂದು ಒಂದು ಮಗು ಅತ್ತರೆ, ಮತ್ತೊಂದು ಮಗು ಇಂದು ನಂಗೆ ಇಡ್ಲಿ ಸಾಂಬಾರ್ ಬೇಕು ಎಂದು ಹಠ ಮಾಡಿತು".

ವಿಂಧ್ಯ ಮಕ್ಕಳ ಮಾತಿಗೆ ಸಿಟ್ಟಾಗಿ 'ಇದು ಹೊಟೇಲ್ ಅಲ್ಲ ಮನೆ ಬೇಕಾದ್ರೆ ತಿನ್ನಿ ಇಲ್ಲವಾದರೆ ಹಾಗೆ ಶಾಲೆಗೆ ಹೋಗಿ ಅಂದ ತಕ್ಷಣ ಮಕ್ಕಳ ಅಳು ಜೋರಾಗಿತ್ತು'. ಇವರ ಅಳು ಕೇಳಿದ ಅಜ್ಜ – ಅಜ್ಜಿ ವಿಂಧ್ಯಾ ಮಕ್ಕಳಿಗೆ ಗದರ ಬೇಡ ಅವರ ಇಷ್ಟದ ಆಹಾರ ಮಾಡಿ ಬಡಿಸಲು ಏನು ನಿನಗೆ? ಮನೆಯಲ್ಲಿರುವ ನಿನಗೆ ಮಕ್ಕಳ ಇಷ್ಟ ಕಷ್ಟಗಳ ನೋಡಲು ಆಲಸ್ಯ ಅಲ್ವಾ? ಎಂದರು. ಅವರ ಮಾತು ಕೇಳಿ ಕಣ್ಣಿನಿಂದ ಜಾರಿ ಬೀಳುವ ಕಣ್ಣೀರನ್ನು ಒರೆಸಿಕೊಂಡು ಮಕ್ಕಳ ರಮಿಸಿ ತಿಂಡಿ ಕೊಟ್ಟು ಶಾಲೆಯ ಬಸ್ ಹತ್ತಿಸಿ ಕಳುಹಿಸಿದಳು.

ಇನ್ನೇನು ತಿಂಡಿ ತಿನ್ನಲು ಕುಳಿತುಕೊಳ್ಳಬೇಕು ಎಂದು ಕೊಳ್ಳುವಾಗ ವಿಂಧ್ಯಾ... ಎಳೆ ಬಿಸಿಲಿನಲ್ಲಿ ಕುಳಿತುಕೊಳ್ಳಬೇಕು ಕಾಲು ಗಂಟು ತುಂಬಾ ನೋವು ಸ್ವಲ್ಪ! ಬಾ ಈ ತೈಲ ಹಚ್ಚು ಎಂದು ಅತ್ತೆ ಕರೆದರು. "ಸರಿ ಬಂದೆ ಅತ್ತೆ! ಎಂದು ಅವರ ಕೆಲಸ ಮುಗಿಸಿ ಬಂದ ನಂತರ ತಿಂಡಿ ತಿಂದು ಮುಗಿಸಿದಳು. ನಾಯಿ, ಬೆಕ್ಕುಗಳಿಗೆ ತಿಂಡಿ ಹಾಲು ಕೊಟ್ಟು, ಪಾತ್ರೆ ತೊಳೆದು, ನೆಲವರೆಸಿದಳು".

ಸಿಹಿ, ಕಾರ, ಪತ್ಯದ ಆಹಾರ ಎಂದು ನಾಲ್ಕಾರು ಪದಾರ್ಥಗಳ ಮಾಡಿಟ್ಟು ಅಂದಿನ ಅಡುಗೆ ಕೆಲಸ ಮುಗಿಸಿ ಗಂಡನಿಗೆ ಸಹಾಯ ಮಾಡಲು ತೋಟದ ಕಡೆ ನಡೆದಳು.

ಮಧ್ಯಾಹ್ನ ಅತ್ತೆ – ಮಾವ, ಗಂಡನಿಗೆ ಊಟ ಬಡಿಸಿ ಕೊನೆಯಲ್ಲಿ ತಾನು ತಿಂದು ಅಡುಗೆ ಮನೆ ಸ್ವಚ್ಛಗೊಳಿಸಿ ಮಕ್ಕಳ ಬಟ್ಟೆ ಒಗೆದು ಒಣಗಿಸಿದಳು. ಮಕ್ಕಳು ಶಾಲೆಯಿಂದ ಬರುವುದರೊಳಗೆ ಅವರಿಗಾಗಿ ತಿಂಡಿ ತಯಾರಿಸಿದಳು.

ಮತ್ತೆ ರಾತ್ರಿ ಯತಾ ಪ್ರಕಾರ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಚಪಾತಿ, ಅನ್ನ ಮಾಡಲು ನಿಂತಳು.'ಇದೊಂದು ಕೆಲಸ ಮುಗಿಯೋದೆ ಇಲ್ಲ. ಸಾಕು ಸಾಕಾಗಿ ಹೋಯಿತು ಜೀವನ. ನಾ ಇವತ್ತಿನಿಂದ ಅಡುಗೆ ಮಾಡೋದೇ ಇಲ್ಲ ಎಂದು ಅವಳು ಗೊಣಗಿದಳು. ಅದೇ ಗೊಣಗಾಟದಲ್ಲಿಯೇ ಅಂದಿನ ದಿನ ಮುಗಿಸಿ ನಾಳೆ ತಿಂಡಿಗೆ ಏನ್ ಮಾಡ್ಲಿ? ಎಂದು ತಲೆಯ ಮೇಲೆ ಕೈ ಹೊತ್ತು ಕುಳಿತಳು.

